# ಸಚ್ಚಿದಾನಂದ ಪರಬ್ರಹ್ಮ ಡಾ. ಆಠವಲೆಯವರ ಸಮಷ್ಟಿ ಸಾಧನೆ ಮತ್ತು ಆಧ್ಯಾತ್ಮಿಕ ಅಧಿಕಾರ

(Sachchidananda Parabrahman (Dr) Athavale's
samashti sadhana and spiritual authority) ಕನ್ನಡ (Kannada)

**ಸಂಕಲನಕಾರರು**

**ಹಿಂದೂ ರಾಷ್ಟ್ರ ಸ್ಥಾಪನೆಯ ಉದ್ಘೋಷ ಮಾಡುವ**
**ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಬಾಳಾಜಿ ಆಠವಲೆ**

**ಸಹಸಂಕಲನಕಾರರು**

**ಪ್ರೂ. ಸಂದೀಪ ಗಜಾನನ ಆಳಶಿ**

**ಸನಾತನ ಸಂಸ್ಥೆ**

**ಏಪ್ರಿಲ್ ೨೦೨೩ ರವರೆಗೆ ಸನಾತನದ ೩೬೦ ಗ್ರಂಥಗಳ ಕನ್ನಡ, ಹಿಂದಿ, ಆಂಗ್ಲ, ಮರಾಠಿ, ಗುಜರಾತಿ, ತಮಿಳು, ತೆಲುಗು, ಮಲಯಾಳಂ, ಬಂಗಾಲಿ, ಒರಿಯಾ, ಗುರುಮುಖಿ, ಅಸ್ಸಾಮಿ, ನೇಪಾಳಿ, ಜರ್ಮನ್, ಸರ್ಬಿಯನ್, ಫ್ರೆಂಚ್ ಮತ್ತು ಸ್ಪ್ಯಾನಿಶ್ ಈ ೧೭ ಭಾಷೆಗಳಲ್ಲಿ ೯೩,೩೯,೦೦೦ ಪ್ರತಿಗಳು !**

**ಪ್ರಕಾಶಕರು** : ಶ್ರೀ ಸಿದ್ಧೇಶ್ವರ ಧರ್ಮಜಾಗೃತಿ ಸಂಸ್ಥೆ
Shree Siddheshwar Dharmajagruti Sanstha
ಮ.ಸಂ. 2ಬಿ–29ಎ, ಇಂದಿರಾನಗರ, ಕುಕ್ಕಿಕಟ್ಟೆ,
ಉಡುಪಿ 576 101, ಕರ್ನಾಟಕ. ದೂ.ಕ್ರ. : +91 93424 35617
ಇತರ ದೂ.ಕ್ರ. (ಗೋವಾ) : +91 (0832) 2312664
ವಿ–ಅಂಚೆ : granth@sanatan.org

**ಮುಖಪುಟದ ಪರಿಕಲ್ಪನೆ** : ಕು. ಭಾವಿನಿ ಕಾಪಡಿಯಾ ಮತ್ತು ಕು. ಸಿದ್ಧಿ ಕ್ಷತ್ರಿಯ

**First Edition** : Vatasavitri Vrata, Kaliyug Varsh 5125
(3rd June 2023)

Translated from the original Marathi text 'Sachchidananda Parabrahma Dr Athavale yanchi samasthi sadhana va adhyatmik adhikar'

**ಅನುವಾದಕರು** : ಶ್ರೀ. ಗಣೇಶ ರಾಜಾರಾಮ ಕಾಮತ್

**ಮುದ್ರಣಸ್ಥಳ** : ಆಮೋದ್ ಗ್ರಾಫಿಕ್ಸ್, ಬೆಂಗಳೂರು 560 010.

**ದೇಣಿಗೆ ಮೌಲ್ಯ** : ₹ 115/-

**ISBN :** 978-93-92952-66-1 ॐ ಗ್ರಂಥ ಕ್ರ. : 360

© **ಪ್ರಕಾಶಕರು** All rights are reserved. No part of this publication maybe reproduced, stored in a retrieval system or transmitted, in any form or by any means, mechanical, photocopying, recording or otherwise, without prior written permission of the original publisher. Violators will be liable for criminal / civil action.

## ಗ್ರಂಥದ ಸಂಕಲನಕಾರರ ಪರಿಚಯ

# ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಆಠವಲೆಯವರ ಅದ್ವಿತೀಯ ಕಾರ್ಯ ಮತ್ತು ವೈಶಿಷ್ಟ್ಯಗಳ ಸಂಕ್ಷಿಪ್ತ ಪರಿಚಯ !



೧. ಅಧ್ಯಾತ್ಮಪ್ರಸಾರಕ್ಕಾಗಿ 'ಸನಾತನ ಸಂಸ್ಥೆ'ಯ ಸ್ಥಾಪನೆ

೨. ಶೀಘ್ರ ಈಶ್ವರಪ್ರಾಪ್ತಿಗಾಗಿ 'ಗುರುಕೃಪಾಯೋಗ' ಎಂಬ ಸಾಧನಾಮಾರ್ಗದ ನಿರ್ಮಿತಿ : ಇದಕ್ಕನುಸಾರ ಸಾಧನೆ ಮಾಡಿ ೧೦.೫.೨೦೨೩ ರವರೆಗೆ ೧೨೪ ಸಾಧಕರು ಸಂತರಾಗಿದ್ದು, ೧,೦೯೧ ಸಾಧಕರು ಸಂತತ್ವದೆಡೆಗೆ ಮಾರ್ಗಕ್ರಮಣ ಮಾಡುತ್ತಿದ್ದಾರೆ.

೩. ಆಚಾರಧರ್ಮಪಾಲನೆ, ದೇವತೆಗಳು, ಸಾಧನೆ, ಆದರ್ಶ ರಾಷ್ಟ್ರನಿರ್ಮಾಣ, ಧರ್ಮರಕ್ಷಣೆ ಇತ್ಯಾದಿ ವಿವಿಧ ವಿಷಯಗಳ ಬಗ್ಗೆ ವಿಪುಲ ಗ್ರಂಥಗಳ ನಿರ್ಮಿತಿ

೪. ಹಿಂದುತ್ವವಾದಿ ವರ್ತಮಾನಪತ್ರಿಕೆ 'ಸನಾತನ ಪ್ರಭಾತ'ದ ಸಂಸ್ಥಾಪಕ–ಸಂಪಾದಕರು

೫. ಹಿಂದೂ ರಾಷ್ಟ್ರದ (ಈಶ್ವರೀ ರಾಜ್ಯದ) ಸ್ಥಾಪನೆಯ ಉದ್ಘೋಷ (೧೯೯೮)

೬. ಹಿಂದೂ ರಾಷ್ಟ್ರದ ಸ್ಥಾಪನೆಗಾಗಿ ಸಂತರು, ಸಂಪ್ರದಾಯಗಳು, ಹಿಂದುತ್ವ ವಾದಿಗಳು ಮುಂತಾದವರ ಸಂಘಟನೆ ಹಾಗೂ ಅವರಿಗೆ ಮಾರ್ಗದರ್ಶನ !

(ಸಂಪೂರ್ಣ ಪರಿಚಯಕ್ಕಾಗಿ ಭೇಟಿ ನೀಡಿ **'www.Sanatan.org/Kannada'**)

**ಸಚ್ಚಿದಾನಂದ ಪರಬ್ರಹ್ಮ ಡಾ. ಆಠವಲೆಯರು ಸಾಧಕರಿಗೆ ನೀಡಿದ ಭರವಸೆ !**

**ಸ್ಥೂಲದೇಹಕ್ಕಿಹುದು ಸ್ಥಳಕಾಲಗಳ ಪರಿಮಿತಿ ।**
**ಹೇಗಿರಲಿ ಸದಾ ಎಲ್ಲ ಕಡೆಗಳಲ್ಲಿ ॥**
**ಸನಾತನ ಧರ್ಮವಿಹುದು ನನ್ನ ನಿತ್ಯರೂಪ ।**
**ಆ ರೂಪದಲ್ಲಿರುವೆ ಎಲ್ಲ ಕಡೆಗಳಲ್ಲಿ ಸದಾ ॥**

Jayant Balaji Athavale
17.5.1996

## ಸಹಸಂಕಲನಕಾರರ ಪರಿಚಯ



### ಪೂ. ಸಂದೀಪ ಗಜಾನನ ಆಳಶಿ

ಸನಾತನದ ಗ್ರಂಥಗಳ ಅಂತಿಮ ಸಂಕಲನಕಾರರು. ರಾಷ್ಟ್ರ ಜಾಗೃತಿ ಮತ್ತು ಧರ್ಮಪ್ರಸಾರ ಮಾಡುವ ಪ್ರಸಾರಸಾಹಿತ್ಯ (ಉದಾ. ಸನಾತನ ಪಂಚಾಂಗ, ಕರಪತ್ರ) ಹಾಗೂ ಸಾಧನೆ, ರಾಷ್ಟ್ರ ಮತ್ತು ಧರ್ಮ ಇವುಗಳಿಗೆ ಸಂಬಂಧಿಸಿದ ವರ್ತಮಾನಪತ್ರಿಕೆ 'ಸನಾತನ ಪ್ರಭಾತ' ದಲ್ಲಿ ಪ್ರಬೋಧನಾತ್ಮಕ ಲೇಖನವನ್ನು ಬರೆಯುತ್ತಾರೆ.

---

## ಗ್ರಂಥದ ಅನುಕ್ರಮಣಿಕೆ

**(ಅಧ್ಯಾಯದಲ್ಲಿನ ಕೆಲವು ವೈಶಿಷ್ಟ್ಯಪೂರ್ಣ ಅಂಶಗಳನ್ನು ಕೆಳಗೆ ಕೊಡಲಾಗಿದೆ.)**


**ಅಧ್ಯಾಯ ೧. ಪರಾತ್ಪರ ಗುರು ಡಾ. ಆಠವಲೆಯವರ ವ್ಯಷ್ಟಿ ಮತ್ತು ಸಮಷ್ಟಿ ಸಾಧನೆ ೧೧**

೧ ಉ. ಪರಾತ್ಪರ ಗುರು ಡಾ. ಆಠವಲೆಯವರಿಗೆ ತಮ್ಮ ಸಾಧನೆಯ ಸಂದರ್ಭದಲ್ಲಿ ಧ್ಯಾನದಲ್ಲಿ ದೊರಕಿದ ಉತ್ತರಗಳು ೨೪

೧ ಎ. ಪರಾತ್ಪರ ಗುರು ಡಾಕ್ಟರರು ತೆಗೆದ ತಮ್ಮ ಆಧ್ಯಾತ್ಮಿಕ ಮಟ್ಟ ೫೨

೧ ಐ. 'ಪರಾತ್ಪರ ಗುರು ಡಾ. ಆಠವಲೆಯವರ ಮಾಧ್ಯಮದಿಂದ ಈಶ್ವರೀ ಸಂಕಲ್ಪ ಹೇಗೆ ಕಾರ್ಯ ಮಾಡುತ್ತದೆ ?' ಎಂಬುದನ್ನು ತೋರಿಸುವ ಸೂಕ್ಷ್ಮಜ್ಞಾನದ ಚಿತ್ರ ೫೫

**ಅಧ್ಯಾಯ ೨. ಡಾ. ಆಠವಲೆಯವರ ಆಧ್ಯಾತ್ಮಿಕ ಉನ್ನತಿ ೫೯**

೨ ಅ. ಗುರುಪ್ರಾಪ್ತಿಯ ನಂತರ ಕೇವಲ ೬ ತಿಂಗಳುಗಳಲ್ಲಿ ಡಾ. ಆಠವಲೆಯವರ ನಾಮಜಪ ಅಖಂಡವಾಗಿ ಆಗುವುದು ೫೯

೨ ಇ. ಡಾ. ಆಠವಲೆಯವರು ಕಾಲದ ಬಂಧನದ ಆಚೆಗೆ ಹೋಗುವುದು ೫೯

೨ ಉ. ಪ.ಪೂ. ಭಕ್ತರಾಜ ಮಹಾರಾಜರು ಡಾ. ಆಠವಲೆಯವರನ್ನು ಸಗುಣದಿಂದ ನಿರ್ಗುಣದೆಡೆಗೆ ಒಯ್ಯುವುದು ೬೦

೨ ಒ. ಡಾ. ಆಠವಲೆಯವರ ಆಧ್ಯಾತ್ಮಿಕ ಉನ್ನತಿಯ ಬಗ್ಗೆ ಇತರರಿಗೆ ಅರಿವಾದ ಅಂಶಗಳು ೬೨

| | | |
|---|---|---|
| ೨ ಓ. | ಡಾ. ಆಠವಲೆಯವರ ಆಧ್ಯಾತ್ಮಿಕ ಅವಸ್ಥೆಗಳ ಬಗ್ಗೆ ಸನಾತನದ ಜ್ಞಾನಪಡೆಯುವ ಸಾಧಕರಿಗೆ ದೊರಕಿದ ಜ್ಞಾನ ! | ೬೩ |
| **ಅಧ್ಯಾಯ ೩.** | **ಗುರುಗಳು ಡಾ. ಆಠವಲೆಯವರ ಆಧ್ಯಾತ್ಮಿಕ ಅಧಿಕಾರದ ಬಗ್ಗೆ ತೆಗೆದ ಉದ್ಗಾರಗಳು !** | **೬೯** |
| ೩ ಆ. | ಪ.ಪೂ. ಭಕ್ತರಾಜ ಮಹಾರಾಜರು ಡಾ. ಆಠವಲೆಯವರ ಆಧ್ಯಾತ್ಮಿಕ ಅಧಿಕಾರದ ಬಗ್ಗೆ ಭಕ್ತರಿಗೆ ನೀಡಿದ ಅನುಭೂತಿ | ೭೪ |
| ೩ ಇ. | ಡಾ. ಆಠವಲೆಯವರು ತಯಾರಿಸಿದ ಸಾಧಕರ ಬಗ್ಗೆ ಪ.ಪೂ. ಭಕ್ತರಾಜ ಮಹಾರಾಜರು ತೆಗೆದ ಗೌರವೋದ್ಗಾರ ! | ೭೫ |
| **ಅಧ್ಯಾಯ ೪.** | **ಗುರುಗಳು ಡಾ. ಆಠವಲೆಯವರಿಗೆ ನೀಡಿದ ಆಶೀರ್ವಾದ !** | **೭೬** |
| ೪ ಅ. | ೧೯೮೮ ಮತ್ತು ೧೯೯೩ – 'ಜನರು ಇವನನ್ನು ಡಾ. ಆಠವಲೆಯವರನ್ನು) ಪೂಜಿಸುವರು !' | ೭೬ |
| ೪ ಆ. | ೧೯೯೦ – 'ತೂ ಕಿತಾಬೋಂಕೆ ಊಪರ್ ಕಿತಾಬೆ ಲಿಖೇಗಾ ।' | ೭೯ |
| ೪ ಇ. | ೧೯೯೨ ರಿಂದ ೧೯೯೫ – 'ಅಧ್ಯಾತ್ಮಪ್ರಸಾರ ಮಾಡಿ !' | ೭೯ |
| ೪ ಈ. | ೧೯೯೩ – 'ಡಾಕ್ಟರ್, ನೀವು ನಮಗೆ (ಪ.ಪೂ. ಬಾಬಾರವರಿಗೆ) ತನು–ಮನ–ಧನವನ್ನು ಕೊಟ್ಟಿರಿ. ನಾವು ನಿಮಗೆ ಜ್ಞಾನ, ಭಕ್ತಿ ಮತ್ತು ವೈರಾಗ್ಯವನ್ನು ಕೊಟ್ಟೆವು !' | ೮೧ |
| ೪ ಉ. | ೧೯೯೪ – 'ಮುಂದೆ ನಿಮಗೆ (ಡಾ. ಆಠವಲೆಯವರ) ಸಾವಿರಾರು ಶಿಷ್ಯರಾಗುವರು !' | ೮೨ |
| **ಅಧ್ಯಾಯ ೫.** | **ಡಾ. ಆಠವಲೆಯವರ ಬಗ್ಗೆ ಸಂತರು, ಮಹರ್ಷಿಗಳು (ಜೀವನಾಡಿಪಟ್ಟಿ) ಮತ್ತು ದೇವತೆಗಳು ತೆಗೆದ ಗೌರವೋದ್ಗಾರ !** | **೮೫** |
| ೫ ಇ. | ಶ್ರೀ ದೇವ ಹಾಲಸಿದ್ಧನಾಥರವರು ಭವಿಷ್ಯಕಥನದ ಮೂಲಕ ಪರಾತ್ಪರ ಗುರು ಡಾ. ಆಠವಲೆಯವರ ಬಗ್ಗೆ ತೆಗೆದ ಉದ್ಗಾರ ! | ೯೪ |
| **ಅಧ್ಯಾಯ ೬.** | **ಡಾ. ಆಠವಲೆಯವರಿಗೆ ಬಂದ ವೈಶಿಷ್ಟ್ಯಪೂರ್ಣ ಅನುಭೂತಿಗಳು** | **೯೬** |
| ೬ ಆ. | ಗುರುಗಳು ಶಕ್ತಿ ಕೊಟ್ಟ ನಂತರ ಡಾ. ಆಠವಲೆಯವರು ಅನುಭವಿಸಿದ ಆಧ್ಯಾತ್ಮಿಕ ಅವಸ್ಥೆ | ೯೬ |
| ೬ ಐ. | ೨೦೨೧ ರಿಂದ ಡಾ. ಆಠವಲೆಯವರಿಗೆ ಬ್ರಹ್ಮಾನಂದದ ಅನುಭೂತಿ ಬರುವುದು | ೧೦೦ |
| **卐** | **ಸಂಕಲನಕಾರರ ವೈಜ್ಞಾನಿಕ ದೃಷ್ಟಿಕೋನ ಮತ್ತು ಇತರ ಮಾಹಿತಿ** | **೧೦೩** |

## ಗ್ರಂಥದ ಮನೋಗತ

‘ಆಪಣಾಸಾರಿಖೇ ಕರಿತಿ ತಾತ್ಕಾಳ । ನಾಹೀ ಕಾಳ ವೇಳ ಮಗ ತ್ಯಾಸೀ ॥’ (ಅರ್ಥ : ತಮ್ಮಂತೆ ಮಾಡುವರು ಕೂಡಲೇ । ಅದಕ್ಕಿಲ್ಲ ಕಾಲ ಸಮಯದ ಪರಿಮಿತಿ ॥) ಹೀಗೆ ಶ್ರೀಗುರುಗಳ ಮಹಿಮೆಯನ್ನು ವರ್ಣಿಸಲಾಗಿದೆ. ಪ.ಪೂ. ಭಕ್ತರಾಜ ಮಹಾರಾಜರು ಡಾ. ಜಯಂತ ಆಠವಲೆಯವರನ್ನು ‘ಶಿಷ್ಯ’ರೆಂದು ಸ್ವೀಕರಿಸಿದ ನಂತರ ಕಡಿಮೆ ಕಾಲಾವಧಿಯಲ್ಲಿಯೇ ಅವರನ್ನು ‘ತಮ್ಮವರಂತೆ’ ಮಾಡಿದರು ! ಕೇವಲ ೩ ವರ್ಷಗಳಲ್ಲಿಯೇ ಗುರುಗಳು ಎಲ್ಲರೆದುರು ಡಾ. ಆಠವಲೆಯವರ ಆಧ್ಯಾತ್ಮಿಕ ಅಧಿಕಾರವನ್ನು ಪ್ರಶಂಸಿಸಲಾರಂಭಿಸಿದರು. ಈ ಅಧಿಕಾರ, ಹಾಗೆಯೇ ಗುರುಗಳು ಮತ್ತು ಕೆಲವು ಸಂತರು ಡಾ. ಆಠವಲೆಯವರ ಬಗ್ಗೆ ತೆಗೆದ ಗೌರವೋದ್ಗಾರಗಳನ್ನು ಪ್ರಸ್ತುತ ಗ್ರಂಥದಲ್ಲಿ ನೀಡಲಾಗಿದೆ. ಕೆಲವು ಇತರ ಪಂಥದ ಸಂತರೂ ಡಾ. ಆಠವಲೆಯವರ ಆಧ್ಯಾತ್ಮಿಕ ಸಾಮರ್ಥ್ಯವನ್ನು ಗುರುತಿಸಿ ಮುಕ್ತಕಂಠದಿಂದ ಅವರ ಪ್ರಶಂಸೆ ಮಾಡಿರುವುದೂ ವಿಶೇಷವಾಗಿದೆ ! ಇದರಿಂದ ಡಾ. ಆಠವಲೆಯವರ ಅಸಾಮಾನ್ಯ ಆಧ್ಯಾತ್ಮಿಕ ವಿಭೂತಿಮತ್ವದ ಪರಿಚಯವಾಗುತ್ತದೆ.

ಸದ್ಯ ಸಾಧಕರು ಆಪತ್ಕಾಲದ ತಾಪವನ್ನು ಸಹಿಸುತ್ತಾ ಸಚ್ಚಿದಾನಂದ ಪರಬ್ರಹ್ಮ ಡಾ. ಆಠವಲೆಯವರ ಮೇಲೆ ಶ್ರದ್ಧೆಯನ್ನಿಟ್ಟು ಹಿಂದೂ ರಾಷ್ಟ್ರದ ಸ್ಥಾಪನೆಯ ಕಾರ್ಯಕ್ಕಾಗಿ ಕಾರ್ಯನಿರತರಾಗಿದ್ದಾರೆ. ಈ ಗ್ರಂಥದಿಂದ ಸಾಧಕರಲ್ಲಿ ಸಚ್ಚಿದಾನಂದ ಪರಬ್ರಹ್ಮ ಡಾಕ್ಟರರ ಬಗೆಗಿನ ಶ್ರದ್ಧೆ ಮತ್ತು ಭಾವ ಇನ್ನೂ ಹೆಚ್ಚಾಗುವುದು. ಇದರಿಂದ ಬರುವ ಭೀಕರ ಆಪತ್ಕಾಲದಲ್ಲಿ ಎಷ್ಟೇ ಮಹಾಭಯಂಕರ ಸಂಕಟಗಳು ಎರಗಿದರೂ, ಸಾಧಕರ ಅಂತಃಕರಣದಲ್ಲಿ ‘ಅರೆ, ಏಕೆ ಹೆದರುವೆ ? ಪ.ಪೂ. ಡಾಕ್ಟರರಿದ್ದಾರಲ್ಲ !’ ಎಂಬ ಶಬ್ದಗಳು ಪುನಃ ಪುನಃ ಮೂಡುವವು. ಅದಕ್ಕಾಗಿಯೇ ಈ ಗ್ರಂಥದಲ್ಲಿ ನಾವು ಇವೆಲ್ಲ ಆಶೀರ್ವಾದ ಮತ್ತು ಗೌರವೋದ್ಗಾರಗಳನ್ನು ಸೇರಿಸಿದ್ದೇವೆ. ‘ಸಚ್ಚಿದಾನಂದ ಪರಬ್ರಹ್ಮ ಡಾ. ಆಠವಲೆಯವರ ವ್ಯಕ್ತಿತ್ವವನ್ನು ಬಿಂಬಿಸಲು ಅಥವಾ ವ್ಯವಹಾರಿಕ ಉದ್ದೇಶವನ್ನಿಟ್ಟುಕೊಂಡು ಅವರ ಮಹಿಮೆಯನ್ನು ಹೆಚ್ಚಿಸಲು ಮಾಡಿದ ಪ್ರಯತ್ನ’ ಎಂಬ ಹೀನ ಭಾವನೆಯಿಂದ ಯಾರೂ ನೋಡಬಾರದು.

ಗುರುಗಳ ಆಶೀರ್ವಾದವೇ ಶಿಷ್ಯನ ಸಾಮರ್ಥ್ಯ ಮತ್ತು ಖ್ಯಾತಿಯನ್ನು ಹೆಚ್ಚಿಸುತ್ತವೆ. ಗುರುಗಳ ಆಶೀರ್ವಾದದಿಂದಲೇ ಇಂದಿಗೂ ಸಚ್ಚಿದಾನಂದ ಪರಬ್ರಹ್ಮ ಡಾ. ಆಠವಲೆಯವರು ಅಖಿಲ ಮನುಕುಲದ ಉದ್ಧಾರಕ್ಕಾಗಿ ಧರ್ಮಸಂಸ್ಥಾಪನೆಯ, ಅಂದರೆ ಹಿಂದೂ ರಾಷ್ಟ್ರದ ಸ್ಥಾಪನೆಯ ದಿವ್ಯ ಕಾರ್ಯವನ್ನು ಮಾಡುತ್ತಿದ್ದಾರೆ. ಇಷ್ಟೇ ಅಲ್ಲದೇ ಈ ಕಾರ್ಯವನ್ನು ಮಾಡುವ ಸಾವಿರಾರು ಸಾಧಕರನ್ನೂ ಅವರು ತಯಾರಿಸುತ್ತಿದ್ದಾರೆ ! ಇದು ಅವರ ಅದ್ವಿತೀಯ ವೈಶಿಷ್ಟ್ಯವಾಗಿದೆ. ಶಿಷ್ಯನಿಗೆ ಗುರುಗಳ

ಆಶೀರ್ವಾದ ದೊರೆಯಲು ಶಿಷ್ಯನ ಸಾಧನೆಯೂ ಅಷ್ಟೇ ಸರಿಸಮನಾಗಿರಬೇಕು. ಶಿಷ್ಯನಲ್ಲಿ ಗುರುಗಳ ಬಗ್ಗೆ ಸಂಪೂರ್ಣ ಸಮರ್ಪಣಾಭಾವ, ಗುರುಕಾರ್ಯದ ಬಗ್ಗೆ ಪರಾಕಾಷ್ಠೆಯ ತಳಮಳ, ಸಮಷ್ಟಿ ಉದ್ಧಾರದ ವ್ಯಾಪಕ ವಿಚಾರ ಇತ್ಯಾದಿ ಗುಣಗಳ ಸಮುಚ್ಚಯವಿರಬೇಕಾಗುತ್ತದೆ. ಸಚ್ಚಿದಾನಂದ ಪರಬ್ರಹ್ಮ ಡಾ. ಆಠವಲೆಯವರಲ್ಲಿ ಈ ಗುಣಗಳಿರುವುದರಿಂದ ಅವರಿಗೆ ಗುರುಗಳ ಆಶೀರ್ವಾದ ದೊರಕಿತು ಮತ್ತು ಅದು ಫಲಪ್ರದವೂ ಆಯಿತು ! ಇದರಿಂದ ಸಚ್ಚಿದಾನಂದ ಪರಬ್ರಹ್ಮ ಡಾಕ್ಟರರ ಸಾಧನೆಯು ಎಷ್ಟು ಉಚ್ಚ ಮಟ್ಟದ್ದಾಗಿದೆ ಎಂಬುದೂ ಗಮನಕ್ಕೆ ಬರುತ್ತದೆ. ಅವರು ಮಾಡಿದ ವ್ಯಷ್ಟಿ ಮತ್ತು ಸಮಷ್ಟಿ ಸಾಧನೆಯ ಸಂಕ್ಷಿಪ್ತ ಸಾರಾಂಶವನ್ನೂ ಈ ಗ್ರಂಥದಲ್ಲಿ ನೀಡಲಾಗಿದೆ.

ಇಂದಿನವರೆಗೆ ಅನೇಕ ಸಂತ–ಮಹಾತ್ಮರು ಆಗಿ ಹೋದರು. ಸಾಧಕಾವಸ್ಥೆಯಿಂದ ಬ್ರಹ್ಮಪದದ ಪ್ರಾಪ್ತಿಯವರೆಗಿನ ಅವರ ಸಾಧನಾಪ್ರವಾಸದಲ್ಲಿ ಅವರ ಆಂತರಿಕ ಅವಸ್ಥೆಗಳಲ್ಲಾದ ಪರಿವರ್ತನೆ, ಅವರ ಆಧ್ಯಾತ್ಮಿಕ ಉನ್ನತಿಯ ಮೌಲ್ಯಮಾಪನ ಇತ್ಯಾದಿಗಳು ಇತರರಿಗೆ ತಿಳಿಯಲಿಲ್ಲ. ಸಂತರು ಅಹಂರಹಿತರಾಗಿರುವುದರಿಂದ ತಾವಾಗಿಯೇ ಇವೆಲ್ಲವನ್ನೂ ಹೇಳುವುದೂ ಇಲ್ಲ. ಸಚ್ಚಿದಾನಂದ ಪರಬ್ರಹ್ಮ ಡಾ. ಆಠವಲೆಯವರು ಮಾತ್ರ ಸಾಧಕರಿಗೆ ಇವೆಲ್ಲವೂ ಕಲಿಯಲು ಸಿಗಬೇಕೆಂದು 'ತಮ್ಮ ಉನ್ನತಿಯ ಮೌಲ್ಯಮಾಪನ ಮಾಡಲು ಬರುವಂತಹ' ಅಂಶಗಳನ್ನು ಅವರು ಸಾಧಕಾವಸ್ಥೆಯಿಂದಲೇ ಬರೆದಿಟ್ಟಿದ್ದರು, ಹಾಗೆಯೇ ಇದರ ಬಗ್ಗೆ ಅವರು ಮುಂದೆ ಸನಾತನದ ಜ್ಞಾನ ಪಡೆಯುವ ಸಾಧಕರಿಂದಲೂ ಅರಿತುಕೊಂಡರು. ಇವೆಲ್ಲ ಅಮೂಲ್ಯ ಮಾಹಿತಿಗಳೂ ಈ ಗ್ರಂಥದಲ್ಲಿವೆ. ಇದು ಈ ಗ್ರಂಥದ ವಿಭಿನ್ನತೆಯಾಗಿದೆ.

೧೯೯೦ ರಿಂದ ಗುರುಗಳು ವಿವಿಧ ರೀತಿಯಲ್ಲಿ ಸಚ್ಚಿದಾನಂದ ಪರಬ್ರಹ್ಮ ಡಾ. ಆಠವಲೆಯವರ ಆಧ್ಯಾತ್ಮಿಕ ಅಧಿಕಾರವನ್ನು ಎಲ್ಲರ ಗಮನಕ್ಕೆ ತಂದು ಕೊಡುತ್ತಿದ್ದರೂ ಇಂದಿನವರೆಗೆ ಸಚ್ಚಿದಾನಂದ ಪರಬ್ರಹ್ಮ ಡಾಕ್ಟರರು ತಮ್ಮನ್ನು ಗುರುಗಳ ಶಿಷ್ಯರೆಂದೇ ತಿಳಿಯುತ್ತಾರೆ ಮತ್ತು ಶಿಷ್ಯಭಾವದಿಂದಲೇ ಸನಾತನದ ಆಶ್ರಮದಲ್ಲಿರುತ್ತಾರೆ ! ಇದೂ ಸಹ ಅವರ ಒಂದು ವೈಶಿಷ್ಟ್ಯವೇ ಆಗಿದೆ. ಇಂತಹ ಅತ್ಯುಚ್ಚ ಮಟ್ಟದ ಸಂತರ ಮಾರ್ಗದರ್ಶನಕ್ಕನುಸಾರ ಸಾಧನೆಯನ್ನು ಮಾಡುವ ಭಾಗ್ಯ ದೊರಕಲು ಜನ್ಮಜನ್ಮಾಂತರಗಳ ಪುಣ್ಯವಿರಬೇಕಾಗುತ್ತದೆ. ನಮಗೆಲ್ಲರಿಗೂ ಈ ಭಾಗ್ಯ ದೊರಕಿದೆ. ಸಚ್ಚಿದಾನಂದ ಪರಬ್ರಹ್ಮ ಡಾಕ್ಟರರ ಜನ್ಮ ಕೇವಲ ಸಾಧಕರ ಉದ್ಧಾರಕ್ಕಾಗಿಯೇ ಆಗಿರುವಂತಿದೆ. ಅವರಂತಹ ಗುರುಗಳ ಇಂದು ಇಡೀ ಪೃಥ್ವಿಯಲ್ಲಿ ಹುಡುಕಿದರೂ ಸಿಗುವುದಿಲ್ಲ. ಇಂದಿನವರೆಗೆ ಸಾಧಕರ ಮೇಲೆ ಬಂದಿರುವ ಎಲ್ಲ ಸಂಕಟಗಳ ಸಮಯದಲ್ಲಿ ಅವರೇ ಸಾಧಕರ ಸರ್ವತೋಮುಖ ಕಾಳಜಿ ವಹಿಸಿದ್ದಾರೆ. ಸಾಧಕರು

‘ಗುರುಗಳೇ ಭಗವಂತ. ಗುರುಗಳಿಗಾಗಿಯೇ ನನ್ನ ಜನ್ಮವಾಗಿದೆ’ ಎಂಬ ಭಾವವನ್ನಿಟ್ಟು ಅವರ ಮಾರ್ಗದರ್ಶನದಲ್ಲಿ ಸಾಧನೆ ಮಾಡಿದರೆ ಘೋರ ಆಪತ್ಕಾಲದಲ್ಲಿ ಅವರ ರಕ್ಷಣೆಯಂತೂ ಆಗಲಿದೆ, ಹಾಗೆಯೇ ಸಾಧಕರು ಮೋಕ್ಷಕ್ಕೂ ಹೋಗುವರು. ಈ ಗ್ರಂಥದ ಮಾಧ್ಯಮದಿಂದ ‘ಎಲ್ಲರಿಗೂ ಹೀಗೆ ತಳಮಳದಿಂದ ಸಾಧನೆ ಮಾಡುವ ಬುದ್ಧಿ ಮತ್ತು ಪ್ರೇರಣೆ ಸಿಗಲಿ’ ಎಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ !’
**– (ಪೂ.) ಸಂದೀಪ ಆಳಶಿ (೧೨.೧೧.೨೦೨೨)**

(ಗ್ರಂಥಮಾಲಿಕೆ ‘ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಆಠವಲೆಯವರ ಚರಿತ್ರೆ’ ಮತ್ತು ಉಪಮಾಲಿಕೆ ‘ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಆಠವಲೆಯವರ ಸಾಧನಾಪ್ರವಾಸ’ ಇವುಗಳ ಹೆಚ್ಚಿನ ಪರಿಚಯವನ್ನು ‘ಸಾಧನಾಪ್ರವಾಸ : ಖಂಡ ೧’ರಲ್ಲಿ ನೀಡಲಾಗಿದೆ.)

## ಪರಾತ್ಪರ ಗುರು ಡಾ. ಜಯಂತ ಆಠವಲೆಯವರ ‘ಸಚ್ಚಿದಾನಂದ ಪರಬ್ರಹ್ಮ’ ಎಂಬ ಬಿರುದಿನ ಕುರಿತಾದ ವಿವೇಚನೆ !

೧೩.೭.೨೦೨೨ ರಿಂದ ‘ಸಪ್ತರ್ಷಿ ಜೀವನಾಡಿಪಟ್ಟಿ’ಯ ವಾಚನದ ಮಾಧ್ಯಮದಿಂದ ಸಪ್ತರ್ಷಿಗಳ ಆಜ್ಞೆಯಂತೆ ಪರಾತ್ಪರ ಗುರು ಡಾ. ಆಠವಲೆಯವರನ್ನು ‘ಸಚ್ಚಿದಾನಂದ ಪರಬ್ರಹ್ಮ’ ಎಂದು ಸಂಬೋಧಿಸಲಾಗುತ್ತಿದೆ. ಇದಕ್ಕೂ ಮೊದಲು ಗ್ರಂಥಗಳಲ್ಲಿ ಅವರನ್ನು ‘ಪ.ಪೂ. [ಪರಮ ಪೂಜ್ಯ]’ ಮತ್ತು ‘ಪರಾತ್ಪರ ಗುರು’ ಎಂಬ ಬಿರುದುಗಳಿಂದ ಸಂಬೋಧಿಸಲಾಗಿದೆ. ಇದಕ್ಕನುಸಾರ ಪ್ರಸ್ತುತ ಗ್ರಂಥದ ಮುಖಪುಟದಲ್ಲಿ ಮತ್ತು ಗ್ರಂಥದಲ್ಲಿ ಆವಶ್ಯಕವಿರುವ ಕಡೆ ಹೀಗೆ ಉಲ್ಲೇಖಿಸಲಾಗಿದೆ.

## ಸನಾತನದ ಇಬ್ಬರೂ ಸದ್ಗುರುಗಳ ಹೆಸರಿಗೆ ವಿಶಿಷ್ಟ ಆಧ್ಯಾತ್ಮಿಕ ಬಿರುದು ಸೇರಿಸಿರುವುದರ ಹಿಂದಿನ ಕಾರಣ

ನಾಡಿಪಟ್ಟಿವಾಚನದ ಮಾಧ್ಯಮದಿಂದ ಸಪ್ತರ್ಷಿಗಳ ಆಜ್ಞೆಗನುಸಾರ ೧೩.೫.೨೦೨೦ ರಿಂದ ಸದ್ಗುರು (ಸೌ.) ಬಿಂದಾ ನೀಲೇಶ ಸಿಂಗಬಾಳರನ್ನು ‘ಶ್ರೀಸತ್‌ಶಕ್ತಿ (ಸೌ.) ಬಿಂದಾ ನೀಲೇಶ ಸಿಂಗಬಾಳ’ ಮತ್ತು ಸದ್ಗುರು (ಸೌ.) ಅಂಜಲಿ ಮುಕುಲ ಗಾಡಗೀಳರನ್ನು ‘ಶ್ರೀಚಿತ್‌ಶಕ್ತಿ (ಸೌ.) ಅಂಜಲಿ ಮುಕುಲ ಗಾಡಗೀಳ’ ಎಂದು ಸಂಬೋಧಿಸಲಾಗುತ್ತಿದೆ. ಈ ಇಬ್ಬರೂ ಸಂತರು ಸಚ್ಚಿದಾನಂದ ಪರಬ್ರಹ್ಮ ಡಾ. ಆಠವಲೆಯವರ ಆಧ್ಯಾತ್ಮಿಕ ಉತ್ತರಾಧಿಕಾರಿಗಳಾಗಿದ್ದಾರೆ.